ಅನಸೂಯ ಟಿ., ಕೇದಿಗೆಮನೆ

ಭಗವಂತ ಮನುಷ್ಯರನ್ನು ಏಕೆ ಸೃಷ್ಟಿಸಿದ್ದಾನೆ?



ಅವನಿಗೂ ತಿಳಿಯದಂತೆ. ಅದನ್ನು ಯೋಚಿಸಿ ಯೋಚಿಸಿಯೇ ಕಲ್ಲಾಗಿಬಿಟ್ಟ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ಈಗಿನ ಸರ್ಕಾರ ಆರನೇ ಗ್ಯಾರಂಟಿಯಾಗಿ ಸತ್ತವರಿಗೆ ಶವಸಂಸ್ಕಾರ ಉಚಿತ ಎಂದರೆ?

ಏಳನೆಯದಾಗಿ ವಾರ್ಷಿಕ ಪಿಂಡ ಭಾಗ್ಯ ನೀಡಿರೆಂದು ಕೇಳುತ್ತಾರೆ.

ಕುಬೇರಪ್ಪ ಎಂ. ವಿಭೂತಿ, ಹರಿಹರ

ಕೊರಳಲ್ಲಿರಬೇಕಾದ ತಾಳಿಯು ಬ್ರೇಸ್ಲೆಟ್, ಉಂಗುರಗಳ ರೀತಿಯಲ್ಲಿದ್ದರೆ ಸಂಪ್ರದಾಯಕ್ಕೆ ಕುತ್ತಲ್ಲವೆ?

ತಾಳಿಕೆ ಇಲ್ಲದವಳ ಕತ್ತಿನಲ್ಲಿ ತಾಳಿ ಇರುವುದಕ್ಕಿಂತ ಇದು ವಾಸಿ.

ಮಂಡಿ ಕುಮಾರ್, ಬೆಂಗಳೂರು

ಕನ್ನಡಿ ಸುಳ್ಳು ಹೇಳುವುದು ಯಾವ ಸಮಯದಲ್ಲಿ?



ಮೇಕಪ್ ಮುಗಿದಾಗಿನ ಸಮಯದಲ್ಲಿ 'ನೀನು ಸುಂದರಿ' ಎನ್ನುವಾಗ.

ಎನ್. ವೈದೇಹಿ, ಮೈಸೂರು

ಮಾಟ, ಮಂತ್ರ ಮಾಡುವವರು, ದೆವ್ವಭೂತ ಬಿಡಿಸುವವರು ಬೇವಿನಸೊಪ್ಪನ್ನೇ ಏಕೆ ಬಳಸುತ್ತಾರೆ?

ಬೇವಿನ ಕಹಿ ಪಿಶಾಚಿಗಳಿಗೂ ಬೇಡವಂತೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಅಲಂಕಾರ ಹೆಚ್ಚಾದರೆ ವಿಕಾರ. ಅಹಂಕಾರ ಹೆಚ್ಚಾದರೆ?

ವಿನಾಶಕರ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

ಈಗಿನ ಜನರು ಆರೋಗ್ಯ ಏರುಪೇರಾದಾಗ ಪಥ್ಯ ಮಾಡಲು ಹಿಂಜರಿಯುವುದೇಕೆ?

ಖಾದ್ಯವಸ್ತುಗಳೂ ಕಲಬೆರಕೆ ಆಗಿರುವುದರಿಂದ ಪಥ್ಯವೇ ಮುಳುವಾದೀತೆಂಬ ಭಯವಂತೆ.

ದೀಪಕ್ ಜಿ.ಕೆ. ಬೆಂಗಳೂರು

ನಾನಾ, ನೀನಾ?

ನೀ ನಾ; ನಾ ನೀ. ಇದೇ ಅನ್ಯರಲ್ಲಿ ತನ್ನನ್ನು ಕಾಂಬ ಪರಿ.

ಅಮರಯ್ಯಾ ಪತ್ರಿಮಠ, ಸುರಪುರ

ಜೀವನ ಒಂದು ಸರಳ ಪ್ರವಾಸ ಎನ್ನಿಸುವುದು ಯಾವಾಗ?

ಪದೇ ಪದೇ ಸರಳುಗಳ ಹಿಂದೆ ಹೋಗುತ್ತಿರುವಾಗ.

ಪಿ.ಎನ್. ಶ್ರೀವತ್ಸ, ಬೆಂಗಳೂರು

ಸರ್ದಾರ್ಜೀಗಳಲ್ಲಿ ಭಿಕ್ಷೆ ಬೇಡುವವರನ್ನು ನೋಡಬೇಕು ಎನ್ನಿಸಿಬಿಟ್ಟಿದೆಯಲ್ಲಾ?

ಪಂಜಾಬಿನ ಗುಲಾಬಿ ಉದ್ಯಾನದಲ್ಲಿ ಸಿಗುವರಂತೆ – ಪ್ರೇಮಭಿಕ್ಷೆ ಬೇಡುತ್ತಿರುವ ಸರ್ದಾರರು!

ಗಾಯತ್ರಿ, ಬೆಂಗಳೂರು

ಬಿಳಿ ಶುಭ್ರತೆಯ ಸಂಕೇತ. ಆದರೆ ರಾಜಕಾರಣಿಗಳು ಬಿಳಿ ಬಟ್ಟೆ ತೊಡುವ ಸಂಕೇತ?

ಖಜಾನೆಯನ್ನು ಶುಭ್ರವಾಗಿ ಖಾಲಿ ಮಾಡುತ್ತೇವೆಂದು!

ಎಂ.ಸಿ. ಧನ್ಯತಾ, ಬೆಂಗಳೂರು

ಗುರುವನ್ನು ತ್ರಿಮೂರ್ತಿಗಳಿಗೆ ಹೋಲಿಸುವುದೇಕೆ?

ಸರಸ್ವತಿಯ ಕೃಪೆ ಪಡೆದು, ಲಕ್ಷ್ಮಿಯನ್ನು ಒಲಿಸಿಕೊಳ್ಳುತ್ತಾ, ಸತಿಯತ್ತ ಗಮನ ಹರಿಸುವುದರಿಂದ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

ಭಾವನೆ, ಕಲ್ಪನೆ, ಭ್ರಮೆ; ಇವುಗಳ ವ್ಯತ್ಯಾಸವೇನು ಸರ್?

ಭಾಗ್ಯಗಳು ಒಳ್ಳೆಯದೆನ್ನುವುದು ಭಾವನೆ; ಸಮಾಜಮುಖಿ ಎನ್ನುವುದು ಕಲ್ಪನೆ; ಇದೇ ಸರಿದಾರಿ ಎನ್ನುವುದು ಭ್ರಮೆ.

## ಬಹುಮಾನಿತ ಪ್ರಶ್ನೆ

ಪಿ.ಜೆ. ರಾಘವೇಂದ್ರ, ಮೈಸೂರು

ಚಂಡಮಾರುತ ಗಂಡು; ಕೋವಿಡ್ ಮಾರಿ ಹೆಣ್ಣು. ಲಿಂಗಪತ್ತೆ ಮಾಡಿದವರು ಯಾರು?

ಗುಣಗ್ರಾಹಿಗಳು; ಹಾದಿಬೀದಿಯಲ್ಲಿ ರಂಪ ಮಾಡಿದರೆ ಗಂಡು; ಜಗವನ್ನೇ ಕಬ್ಜೆಯಲ್ಲಿಟ್ಟುಕೊಂಡರೆ ಹೆಣ್ಣು.

ಬಿ. ಚಂದ್ರೇಗೌಡ, ಬೆಂಗಳೂರು

ನಿಮ್ಮನ್ನು 'ವೀಕೆಂಡ್ ವಿತ್ ರಮೇಶ್' ಕಾರ್ಯಕ್ರಮದಲ್ಲಿ ಕಾಣುವಾಸೆ. ಬರುವಿರಾ?

ಹಾಸ್ಯ ಬರಹಗಾರರನ್ನು ಕರೆಯುವ ಮಟ್ಟಕ್ಕೆ ಆ ವೇದಿಕೆ ಬೆಳೆದಾಗ ಬರುತ್ತೇನೆ.

ಆರ್. ಮಧುಸೂದನ್, ಹಾಸನ

ಹಿಂದೆ ಹೆಣ್ಣುಮಕ್ಕಳು ಕವಿಗಳ ಕಾವ್ಯಮನೋಭಾವಕ್ಕೆ ಮನಸೋತು ಪ್ರೀತಿಸುತ್ತಿದ್ದರು. ಈಗ?

ಕಾಯುವ ಮನೋಭಾವಕ್ಕೆ.

ನಾರಾಯಣ ಯಾಜಿ, ಶಿರಾಲಿ

ಮೇರುನಟ ರಾಜ್‌ಕುಮಾರ್ ಅವರಿಗೆ ಅಭಿಮಾನಿಗಳೇ ದೇವರು. ನಿಮಗೆ?



ಸಾಹಿತ್ಯವೇ ಮಂದಿರ; ಶುದ್ಧಹಾಸ್ಯವೇ ದೇವರು.

ಬಿ.ಆರ್. ಉಷಾ, ಕೆನಡಾ

ಫಾರಿನ್‌ನಲ್ಲಿ ಇಂಡಿಯನ್ ಫುಡ್, ಇಂಡಿಯನ್ ಶಾಪ್ ಹುಡುಕುವ ಜನ ಇಂಡಿಯಾ ಬಿಟ್ಟು ಬರುವುದೇಕೆ?

ಇಂಡಿಯಾದಲ್ಲಿ ಡಾಲರ್ ಲೆಕ್ಕದ ಸಂಬಳ ಇಲ್ಲವಲ್ಲ.

ಸುಶೀಲಾ ಎಸ್. ಪಾಟೀಲ, ಸಂಕೇಶ್ವರ

'ನೀನಾರಿಗಾದೆಯೋ ಎಲೆ ಮಾನವ?' ಎಂದು ಯಾವ ಮೂರ್ಖ ಕೇಳಿದ್ದಾನೆ?

'ಎಲೆ ಮಾನವ' ಎಂದರೆ ಇಸ್ಪೀಟ್ ಆಡುವವನು. ಕೇಳಿರುವುದು ಸರಿಯೇ ಇದೆ!

■ ರಾಮ್